ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/09/ಇಸಿಎಸ್(2)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದೂರವಾಣಿ ಸಂಖ್ಯೆ:080-2220777
ದಿನಾಂಕ: 22.12.2023

## ಸುತ್ತೋಲೆ

ವಿಷಯ: ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಅವಧಿಯಲ್ಲಿ ಅನಧಿಕೃತ ಗೈರುಹಾಜರಾಗಿರುವ/ನಿರ್ದೇಶಕರ ಪೂರ್ವಾನುಮತಿ ಇಲ್ಲದೆ ರಜೆ ಪಡೆದಿರುವ ಉಪನ್ಯಾಸಕರು/ ಸಿಬ್ಬಂದಿಯವರ ವಿವರಗಳನ್ನು ನೀಡುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: 06/ಇಸಿಎಸ್(1)/2023 ದಿನಾಂಕ:18.11.2023 &ದಿನಾಂಕ: 06.12.2023

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳು ಹಾಗೂ ತತ್ಸಂಬಂಧಿತ ಮೌಲ್ಯಮಾಪನ ಕಾರ್ಯಗಳು ಹಾಗೂ ಮರುಮೌಲ್ಯಮಾಪನ ಕಾರ್ಯಗಳು ಸಹ ಜರುಗಲಿದ್ದು ಪರೀಕ್ಷಾ ಪ್ರಾರಂಭದ ದಿನದಿಂದ ಪರೀಕ್ಷೆಗಳು ಮುಗಿಯುವ ದಿನಗಳವರೆಗೂ ಮತ್ತು ಮೌಲ್ಯಮಾಪನ /ಮರುಮೌಲ್ಯಮಾಪನಗಳ ಅವಧಿಗಳಲ್ಲಿ ಪ್ರಾಂಶುಪಾಲರು ಸ್ವತ: ಸಾಂದರ್ಭಿಕ/ಪರಿವರ್ತಿತ/ಗಳಿಕೆ ರಜೆ ಸೇರಿದಂತೆ ಯಾವುದೇ ರಜೆ ಪಡೆಯದಂತೆ ಹಾಗೂ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ ಸದರಿ ರಜೆಗಳನ್ನು ಮಂಜೂರು ಮಾಡಬಾರದೆಂದು, ತುರ್ತು ಸಂದರ್ಭಗಳಲ್ಲಿ ಮಾತ್ರ ನಿರ್ದೇಶಕರ ಪೂರ್ವಾನುಮತಿ ಪಡೆದು ಕ್ರಮಕೈಗೊಳ್ಳಲು ಉಲ್ಲೇಖದ ಈ ಕಛೇರಿ ಸುತ್ತೋಲೆಗಳಲ್ಲಿ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿತ್ತು.

ಆದಾಗ್ಯೂ ಕೆಲವು ಸಂಸ್ಥೆಗಳ ಪ್ರಾಂಶುಪಾಲರುಗಳು ಮಂಡಳಿಯ ಪೂರ್ವಾನುಮತಿ ಪಡೆಯದೆ ಉಪನ್ಯಾಸಕರು/ ಸಿಬ್ಬಂದಿಯವರಿಗೆ ರಜೆ ಮಂಜೂರು ಮಾಡಿದ್ದು, ಅಂತಹ ಉಪನ್ಯಾಸಕರ/ ಸಿಬ್ಬಂದಿಯವರ ವಿವರ/ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರುಹಾಜರಾಗಿರುವ ಉಪನ್ಯಾಸಕರ/ ಸಿಬ್ಬಂದಿಯವರ ವಿವರಗಳನ್ನು ಈ ಕೂಡಲೇ ಮಂಡಳಿಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ & ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ
- ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಕಂಪ್ಯೂಟರ್ ವಿಭಾಗಕ್ಕೆ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಮಾನ್ಯ ಆಯುಕ್ತರವರ ಆಪ್ತ ಶಾಖೆ
4. ನಿರ್ದೇಶಕರ ಆಪ್ತ ಶಾಖೆ
5. ಕಾರ್ಯದರ್ಶಿಯವರ ಆಪ್ತಶಾಖೆ